ಮಾನ್ಯ ಸದಸ್ಯರು ಹೇಳಿದಂತೆ ಗಡ್ಡೀ ಜಮೀನು ತಾಂಡಗಳು ಏನಿವೆ ಅದಕ್ಕೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಆಲಗೂರ ಗ್ರಾಮದಿಂದ ಮಾಡುತ್ತೇವೆಂದು ನಾನು ಉತ್ತರದಲ್ಲಿ ಸ್ಪಷ್ಟವಾಗಿ ಹೇಳಿದ್ದೇನೆ.

ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್ : ಈ ವಸತಿ ಪ್ರದೇಶದಲ್ಲಿ ಇರುವಂತಹ ಜನರಿಗೆ ನೀರು ಕೊಡುವುದಕ್ಕೆ ಸಾಧ್ಯವಿಲ್ಲ. ಬಹಳ ಖರ್ಚು ಬರುವುದಿಲ್ಲ, ಆದ್ದರಿಂದ ತೊದಲಬಾಗಿಯಿಂದ ನೀರನ್ನು ತರುವುದು ಸರಿಯೆಂದು ನನ್ನ ಅಭಿಪ್ರಾಯ. ಆದುದರಿಂದ ಅದರ ಬಗ್ಗೆ ದಯವಿಟ್ಟು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳಬೇಕೆಂದು ಅವರಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ನಾವು ಇದರ ಬಗ್ಗೆ ಅಧಿಕಾರಿಗಳಿಗೆ instruction ಕೊಟ್ಟು, ನಮಗೆ ಇರವಂತಹ ಮಾಹಿತಿ ಪ್ರಕಾರ ಆಲಗೂರ ಗ್ರಾಮದಿಂದ ಮಾಡಿದರೆ feasible ಆಗುತ್ತದೆಂದು report ಇದೆ. ನಾವು ಅದನ್ನು adopt ಮಾಡುತ್ತಿದ್ದೇವೆ. ಇನ್ನು ತೊದಲಬಾಗಿ ಯಿಂದ ನೀರು ತರುವ ಬಗ್ಗೆ ಹೇಳುತ್ತಿದ್ದಾರೆ. ಅಲ್ಲಿಂದ ನೀರು ತಂದರೆ ಎಷ್ಟು cost ಬರುತ್ತದೆ, ಅದು feasibility ಇದೆಯೋ ಇಲ್ಲವೋ ಎನ್ನುವುದರ ಬಗ್ಗೆ ನಮ್ಮ ಅಧಿಕಾರಿಗಳಿಗೆ ಸೂಚನೆ ಕೊಟ್ಟು study ಮಾಡಿ ವರದಿ ಕೊಡಿ ಎಂದು ಹೇಳುತ್ತೇನೆ. ಅದರಲ್ಲಿ ಯಾವುದು ಸರಿಯಿದೆ ಎನ್ನುವುದನ್ನು ನೋಡಿಕೊಂಡು we will take a decision.

ಸಂಡೂರು ತಾಲ್ಲೂಕಿನಲ್ಲಿ ಮುಖ್ಯೋಪಾಧ್ಯಾಯರ ಹಾಗೂ ಶಿಕ್ಷಕರ ಕೊರತೆ ಇರುವ ಬಗ್ಗೆ

97 (779) ಶ್ರೀ ತುಕಾರಾಮ್. ಇ (ಸಂಡೂರ್) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಂಡೂರು ತಾಲ್ಲೂಕಿನಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಮುಖ್ಯೋಪಾಧ್ಯಾಯರ ಹಾಗೂ ಶಿಕ್ಷಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಸಂಖ್ಯೆ ಎಷ್ಟು (ವಿವರಗಳನ್ನು ಒದಗಿಸುವುದು);

ಇ) ಶಿಕ್ಷಕರ ನೇಮಕಾತಿ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಸಂಡೂರು ತಾಲ್ಲೂಕಿನಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಕರನ್ನು ಹೊಂದಿದ್ದು, ಶಿಕ್ಷಕರ ಕೊರತೆ ಇರುವುದಿಲ್ಲ.

ಪ್ರತಿ ವರ್ಷ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ ಆಗುತ್ತಿರುವುದರಿಂದ ಶಿಕ್ಷಕರ ಕೊರತೆ ಇರುವುದಿಲ್ಲ.

ಪ್ರತಿ ಸರ್ಕಾರಿ ಪ್ರೌಢಶಾಲೆಗೆ ಒಂದು ಮುಖ್ಯ ಶಿಕ್ಷಕರ ಹುದ್ದೆ ಮಂಜೂರಾಗಿರುತ್ತದೆ. ಮುಖ್ಯೋಪಾಧ್ಯಾಯರ ಕೊರತೆ ಇರುವುದಿಲ್ಲ.

ಆ) 62 ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆ ಖಾಲಿ ಇರುತ್ತವೆ. 30 ಪ್ರೌಢಶಾಲಾ ಸಹ ಶಿಕ್ಷಕರ ಹುದ್ದೆ ಖಾಲಿ ಇರುತ್ತವೆ.

05 ಸರ್ಕಾರಿ ಪ್ರೌಢಶಾಲಾ ಮಖ್ಯೋಪಾಧ್ಯಾಯರ ಹುದ್ದೆ ಖಾಲಿ ಇರುತ್ತವೆ.

ಸಂಡೂರು ತಾಲ್ಲೂಕಿನಲ್ಲಿ ಒಟ್ಟು 15 ಪ್ರೌಢಶಾಲೆಗಳಿದ್ದು, 10 ಸರ್ಕಾರಿ ಪ್ರೌಢಶಾಲೆಗಳಲ್ಲಿ ಮುಖ್ಯ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಕೆಳಕಾಣಿಸಿದ 05 ಸರ್ಕಾರಿ ಪ್ರೌಢಶಾಲೆಗಳಲ್ಲಿ ಮುಖ್ಯ ಶಿಕ್ಷಕರ ಹುದ್ದೆ ಖಾಲಿ ಇರುತ್ತವೆ.

1) ಸರ್ಕಾರಿ ಪ್ರೌಢಶಾಲೆ, ಡಿ.ಹಂತಾಪುರ, ಸಂಡೂರು ತಾ:
2) ಸರ್ಕಾರಿ ಪ್ರೌಢಶಾಲೆ, ಯು.ರಾಜಾಪುರ, ಸಂಡೂರು ತಾ :
3) ಸರ್ಕಾರಿ ಪ್ರೌಢಶಾಲೆ, ತೋರಣಗಲ್ಲು, ಸಂಡೂರು ತಾ :
4) ಸರ್ಕಾರಿ ಪ್ರೌಢಶಾಲೆ (ಉರ್ದು), ಸಂಡೂರು.
5) ಸರ್ಕಾರಿ ಪ.ಪೂ.ಕಾಲೇಜು (ಬಾಲಕರ), ಸಂಡೂರು.

ಇ) ದಿನಾಂಕ: 12-03-2010 ರಂದು 62 ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಗೆ ಕೌನ್ಸಿಲಿಂಗ್ ಮಾಡಲಾಗಿದೆ. ಅಂಕಪಟ್ಟಿ ಹಾಗೂ ಇತರೆ ದಾಖಲೆಗಳ ನೈಜತೆಯನ್ನು ದೃಢೀಕರಿಸಿಕೊಂಡು ನೇಮಕಾತಿ ಆದೇಶ ನೀಡಲಾಗುವುದು.

ದಿನಾಂಕ: 26–04–2010 ರಿಂದ 30–04–2010 ರವರೆಗೆ ಕೌನ್ಸಿಲಿಂಗ್ ನಡೆಸಿ ಪ್ರೌಢಶಾಲಾ ಶಿಕ್ಷಕರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಶ್ರೀ ಇ. ತುಕಾರಾಮ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಸಂಡೂರು ತಾಲ್ಲೂಕಿನಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಮಕ್ಕಳ ಸಂಖ್ಯೆಗನುಗುಣವಾಗಿ ಮುಖ್ಯೋಪಾಧ್ಯಾಯರ ಮತ್ತು ಶಿಕ್ಷಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿರುವಂತಹ ಪ್ರಶ್ನೆಗೆ ಉತ್ತರದಲ್ಲಿ ಇಲ್ಲವೆಂದು ಹೇಳುತ್ತಾರೆ. ನಂತರ "ಹೌದು, 62 ಜನ ಶಿಕ್ಷಕರು, ಐದು ಜನ ಪ್ರೌಢ ಶಾಲಾ ಮುಖ್ಯೋಪಾಧ್ಯಾಯರ ಹುದ್ದೆಗಳು ಖಾಲಿ ಇದೆ" ಎಂದು ಹೇಳಿದ್ದಾರೆ. ನಾನು ಕೇಳುವುದೇನೆಂದರೆ ನಂಜುಂಡಪ್ಪ ವರದಿ ಪ್ರಕಾರ ನನ್ನ ಕ್ಷೇತ್ರ ಅತ್ಯಂತ ಹಿಂದುಳಿದ ಕ್ಷೇತ್ರವಾಗಿದೆ. ನನ್ನ ಕ್ಷೇತ್ರ ಸುಮಾರು 75 ಭಾಗ ಗಣಿ ಪ್ರದೇಶ ಮತ್ತು ಕಾರ್ಖಾನೆಗಳಿಂದ ತುಂಬಿದೆ. ನಮ್ಮಲ್ಲಿ ಮಕ್ಕಳಿಗೆ ಶಿಕ್ಷಕರು ಇಲ್ಲವೆಂದಾಗ ಬಹಳ ಅನ್ಯಾಯವಾಗುತ್ತಿದೆ. ನಮ್ಮಲ್ಲಿ ಶಿಕ್ಷಕರ ಕೊರತೆಯಿಂದ ಮಕ್ಕಳು ಹೈಸ್ಕೂಲು ಮತ್ತು ಪಿಯುಸಿ ಯವರೆಗೆ ಶಿಕ್ಷಣವನ್ನು ಮಾಡಿ ಮುಂದಿನ ಶಿಕ್ಷಣಕ್ಕೆ ಹೋಗುವುದಕ್ಕೆ ಬಹಳ ಅನಾನುಕೂಲವಾಗುತ್ತಿದೆ. ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ ತಕ್ಷಣ ಶಿಕ್ಷಕರನ್ನು ತುಂಬಿದರೆ ಮುಂದಿನ ಪೀಳಿಗೆಗೆ ಪದವಿ ಶಿಕ್ಷಣ ಮತ್ತು ಹೆಚ್ಚಿನ ವಿದ್ಯಾಭ್ಯಾಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆದುದರಿಂದ ಇದರ ಬಗ್ಗೆ ತಾವು ಅನುಕೂಲ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಸಂಡೂರು ತಾಲ್ಲೂಕಿನಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಯಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ? ಅವುಗಳನ್ನು ತುಂಬುದವುಕ್ಕೆ ಏನು ಪ್ರಯತ್ನ ಮಾಡಿದ್ದೀರೆಂದು ಪ್ರಶ್ನೆಯನ್ನು ಕೇಳಿದ್ದಾರೆ. ನಾವು ಈಗಾಗಲೆ 62 ಶಿಕ್ಷಕರಿಗೆ 12ನೇ ತಾರೀಖು counselling ಮಾಡಿ ಖಾಲಿಯಿರುವಂತಹ ಸ್ಥಳವನ್ನು ಪೂರ್ಣ ತುಂಬಿದ್ದೇವೆ. ಹೈಸ್ಕೂಲ್‌ಗೆ ಸಂಬಂಧಪಟ್ಟಂತೆ processing ಆಗುತ್ತಿದೆ, ಈ ತಿಂಗಳ 24ನೇ ತಾರೀಖಿನಿಂದ 30ನೇ ತಾರೀಖಿನ ತನಕ counselling ಮಾಡಿ ಹೈಸ್ಕೂಲಿನಲ್ಲಿ ಖಾಲಿಯಿರುವಂತಹ 30 ಹುದೆಗಳನ್ನು ಈ ತಿಂಗಳ ಕೊನೆಯೊಳಗೆ ನಾವು ತುಂಬುತ್ತೇವೆ. ಈಗಾಗಲೇ ತಮಗೆ ಗೊತ್ತಿರುವಂತೆ

ನಮ್ಮೆಲ್ಲರ ಕ್ಷೇತ್ರಗಳಲ್ಲೂ ಖಾಲಿಯಿರುವಂತಹ ಸುಮಾರು 5,000 ಪ್ರಾಥಮಿಕ ಶಾಲಾ ಶಿಕ್ಷಕರನ್ನು, 2,500 ಪ್ರೌಢ ಶಾಲಾ ಶಿಕ್ಷಕರನ್ನು ತುಂಬುವುದಕ್ಕೆ counselling ಪ್ರಕ್ರಿಯೆ ಮಾಡಿ ಖಾಲಿಯಿರುವಂತಹ ಸ್ಥಳಗಳಲ್ಲಿ ಅವರನ್ನು ತುಂಬಿ ಕೊಡುತ್ತಿದ್ದೇವೆ. ಇಡೀ ರಾಜ್ಯದಲ್ಲಿ ಈ ಪ್ರಕ್ರಿಯೆ ಈಗ ನಡೆದಿದೆ. ಹೀಗಾಗಿ ಈ ತಿಂಗಳ ಕೊನೆಯೊಳಗಾಗಿ ಆ ಎಲ್ಲಾ ಸ್ಥಳಗಳಿಗೆ ನೂತನವಾಗಿ ಆಯ್ಕೆಯಾಗಿರುವಂತಹ ನಮ್ಮ ಶಿಕ್ಷಕರು ಅವರ ಸ್ಥಳವನ್ನು ಆಯ್ಕೆ ಮಾಡಿಕೊಂಡು ಅಲ್ಲಿರುತ್ತಾರೆ. ಆಗ ಅಲ್ಲಿ ಯಾವ ಹುದ್ದೆಯೂ ಖಾಲಿ ಇರುವುದಿಲ್ಲ. ಇಡೀ ರಾಜ್ಯದಲ್ಲಿ ಶಿಕ್ಷಕರನ್ನು ಪೂರ್ಣ ಪ್ರಮಾಣದಲ್ಲಿ ತುಂಬುವಂತಹ ನಮ್ಮ ಸರ್ಕಾರದ ಪ್ರಯತ್ನ ಈ ತಿಂಗಳೊಳಗೆ ಮುಕ್ತಾಯ ಗೊಳ್ಳುತ್ತದೆ. ಹಾಗಾಗಿ ಶಿಕ್ಷಕರ ಕೊರತೆ ಇಲ್ಲದ ಹಾಗೆ ನೋಡಿಕೊಳ್ಳುತ್ತೇವೆ. ಈಗಿರುವಂತಹ ಎಲ್ಲಾ ಹಂತದಲ್ಲಿಯೂ ಸಹ ಶಿಕ್ಷಕರ ಮೂಲಕ ಒಳ್ಳೆಯ ಗುಣಮಟ್ಟದ ಶಿಕ್ಷಣವನ್ನು ಕೊಡುವ ಪ್ರಯತ್ನವನ್ನು ಮಾಡುತ್ತಿದ್ದೇವೆ. ಸಂಡೂರು ತಾಲ್ಲೂಕು ಶೈಕ್ಷಣಿಕವಾಗಿ ಸ್ವಲ್ಪ ಹಿಂದುಳಿದಿದೆ ಎನ್ನುವುದು ಸರ್ಕಾರದ ಗಮನದಲ್ಲಿದೆ. ಅದಕ್ಕೆ ಒಂದು ವಿಶೇಷವಾದಂತಹ ಪ್ರಯತ್ನವನ್ನು BRC/PRC ಗಳ ಮೂಲಕ, ನಮ್ಮ ಬೇರೆ ಬೆರೆ ಹಂತದ ಅಧಿಕಾರಿಗಳ ಮೂಲಕ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ಕೊಡುವುದಕ್ಕೆ ಬೇಕಾಗಿರು ವಂತಹ ಅನೇಕ ಉಪಕ್ರಮಗಳನ್ನು ಮತ್ತು ಪ್ರಯತ್ನಗಳನ್ನು ನಾವು ಮಾಡುತ್ತಿದ್ದೇವೆ.

ರಾಜ್ಯ ಶೈಕ್ಷಣಿಕವಾಗಿ ಮುಂದುವರೆಯುವುದಕ್ಕೆ ಸಂಡೂರು ತಾಲ್ಲೂಕು ಒಳಗೊಂಡಂತೆ ಇಡೀ ರಾಜ್ಯದಲ್ಲಿ ಬೇಕಾಗಿರುವಂಥ ಪ್ರಯತ್ನ ವನ್ನು ನಮ್ಮ ಇಲಾಖೆಯಿಂದ ಮಾಡುತ್ತಿದ್ದೇವೆ.

ಶ್ರೀ ಇ. ತುಕಾರಾಮ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಬಹಳ ಸಮರ್ಪಕವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಅದಕ್ಕೆ ಅವರಿಗೆ ಧನ್ಯವಾದ ಗಳನ್ನು ಸಲ್ಲಿಸುತ್ತಿದ್ದೇನೆ. ಅದೇ ರೀತಿಯಾಗಿ ಈ ಪ್ರಕ್ರಿಯೆ ನಿರಂತರವಾಗಿ ಇರಬೇಕೆಂದು ನಾನು ಸರ್ಕಾರಕ್ಕೆ ಮನವಿಯನ್ನು ಮಾಡುತ್ತಿದ್ದೇನೆ.

ರಾಜ್ಯದಲ್ಲಿರುವ ಗ್ರಂಥಾಲಯ ಮೇಲ್ವಿಚಾರಕರ ಬಗ್ಗೆ

98 (783) ಶ್ರೀ ರಮಾನಾಥ ರೈ.ಬಿ. (ಬಂಟ್ವಾಳ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?